

ಕೂತ ಜಾರ್ಡನ್ ನೈಟ್ ಜಾರ್ (ಸಣ್ಣ ನತ್ತಿಂಗ) ಎಂಬ ಹಕ್ಕಿ ಕಣ್ಣಿನ ಸಮೀಪವಿದ್ದರೂ ಗುರುತಿಸಲು ಆಗುವುದಿಲ್ಲ. ಒಣ ಎಲೆಗಳ ಬಟ್ಟೆ ತೊಟ್ಟಂತಿರುವ ಇದನ್ನು ಯಾರೂ ಸುಲಭಕ್ಕೆ ಕಂಡು ಹಿಡಿಯಲಾಗದಂತೆ ಪ್ರಕೃತಿಯೇ ಇದನ್ನು ರೂಪಿಸಿದೆ. ಆ ದಿನ ಇದನ್ನು ಕತ್ತಲಲ್ಲಿ ಕಂಡು ಹಿಡಿದ ನಮ್ಮ ದಾರಿತೋರುಗರು ನಿಪುಣರೇ ಸೈ. ನಾವದರ ಸಮೀಪ ಹೋಗುತ್ತಲೂ ಆ ಹಕ್ಕಿ ಹಾರಿ ಹೋಗಿ ಒಣಕೊಂಬೆ ಮೇಲೆ ಕೂತಿತು. ನಮ್ಮ ಆಗಮನ ಅದಕ್ಕೆ ಕೊಂಚವೂ ಇಷ್ಟವಾಗಿರಲಿಲ್ಲ. ಬ್ಯಾಟರಿ ಬಿಟ್ಟು ನೋಡಿದಾಗ ಅದು ಪುರ್ರನೆ ಹಾರಿ ಹೋದ ಜಾಗೆಯಲ್ಲಿ ಎರಡು ಬಣ್ಣದ ಮೊಟ್ಟೆಗಳಿದ್ದವು. ಅದರ ಚಿತ್ರಗಳನ್ನು ಸರಸರನೆ ತೆಗೆದು ಅದರ ಪಾಡಿಗೆ ಬಿಟ್ಟು ಮುಂದೆ ಹೊರಟೆವು. ನೆಲದ ಮೇಲೆ ಮೊಟ್ಟೆ ಇಟ್ಟು ಕಾವು ಮಾಡುವ ಇಂಥಹ ಪಕ್ಷಿಗಳು ಹೆಚ್ಚು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತವೆ. ಹಾವುಗಳಿಗೆ ಬಲು ಸುಲಭದ ಆಹಾರವೆಂದರೆ ಇದರ ಮೊಟ್ಟೆಗಳು. ಹೆಚ್ಚು ಕಡಿಮೆಯಾದರೆ ತಾಯಿಯೂ ಗುಳುಂ ಆಗಿಬಿಡುವ ಸಂಭವ ಇರುತ್ತದೆ. ಅನೇಕ ಪಕ್ಷಿಗಳು ಅಷ್ಟು ಸುಲಭಕ್ಕೆ ಹಾವಿಗೆ ಮೊಟ್ಟೆ ಉಣ್ಣುವ ಅವಕಾಶ ಕೊಡದೆ ಭಾರಿ ಸಂಘರ್ಷ ನಡೆಸುತ್ತವೆ. ಜೀವದ ಹಂಗು ಬಿಟ್ಟು ಹೋರಾಟ ಮಾಡುತ್ತವೆ. ಆದರೆ ಹಾವುಗಳ ಎದುರು ಅವುಗಳ ಆಟ ಏನೇನೂ ನಡೆಯುವುದಿಲ್ಲ. ಬಲಿ ನಡೆದೇ ಹೋಗುತ್ತದೆ. ಆ ಸಮಯದಲ್ಲಿ ಹಕ್ಕಿಯ ಪುಟಾಣಿ ಮರಿಗಳು ಸಿಕ್ಕರೂ ಹಾವುಗಳು, ನರಿ, ಮುಂಗುಸಿ ಮುಲಾಜಿಲ್ಲದೆ ಮುಗಿಸಿ ಹಾಕುತ್ತವೆ.

ಕೇರಳದ ಸಲೀಂ ಆಲಿ ನ್ಯಾಷನಲ್ ಪಾರ್ಕಿನಲ್ಲಿ ರಾತ್ರಿ ಹೊತ್ತು ಗೂಬೆಗಳ ಚಿತ್ರ ತೆಗೆಯಲು ಒಮ್ಮೆ ಹೋಗಿದ್ದೆವು. ಗೂಬೆಗೆ ಕನ್ನಡದಲ್ಲಿ ಉಲೂಕ, ಗುಮ್ಮ ಎಂಬ ಇತರೆ ಹೆಸರುಗಳೂ ಉಂಟು. ನಾವೆಲ್ಲಾ ಅಶುಭವೆಂದು ಭಾವಿಸುವ ಇವುಗಳು ನೋಡಲು ತುಂಬಾ ಸುಂದರವಾಗಿರುತ್ತವೆ. ಗೂಬೆಯ ಕಣ್ಣುಗಳೇ ಅವುಗಳ ಆಸ್ತಿ. ನನಗೆ ಹೆಚ್ಚು ಚಕಿತವೆನಿಸುವುದು ಅವು ತಮ್ಮ ಕತ್ತನ್ನು ಹಿಮ್ಮುಖವಾಗಿ ತಿರುಗಿಸಿ ನೋಡುವ ವಿಧಾನ. ತುಂಬಾ ಸೂಕ್ಷ್ಮ ಜೀವಿಗಳಾದ ಇವುಗಳ ಬದುಕು ಶುರುವಾಗುವುದೇ ರಾತ್ರಿ ಹೊತ್ತಿನಲ್ಲಿ. ಹಗಲು